

# ಒಲಿಸಿಕೊಳ್ಳಲು ಅನುಕರಣೆ!

ಹುಡುಗಿಯರನ್ನು ಮೆಚ್ಚಿಸಲು ಹುಡುಗರು ತಮ್ಮ ನೆಚ್ಚಿನ ನಟರ ಶೈಲಿಗಳನ್ನು ಅನುಕರಣೆ ಮಾಡುವ ಮೂಲಕ ಹೆಣಗುವುದು ಸಾಮಾನ್ಯ. ಅದರಿಂದ ತಾನೂ ಹೊರತಾಗಿರಲಿಲ್ಲ ಎಂದಿದ್ದಾನೆ ರಣಬೀರ್ ಕಪೂರ್. ಆತನಿಗೆ ಹುಡುಗಿಯರನ್ನು ಮೆಚ್ಚಿಸುವ ಕಲೆಗೆ ಮಾದರಿಯಾಗಿರುವುದು ಶಾರೂಕ್ ಖಾನ್ ಅಂತೆ!

ರಣಬೀರ್ ಎಂಟನೇ ತರಗತಿಯಲ್ಲಿದ್ದಾಗ ಶಾರೂಕ್ ಅಭಿನಯದ 'ಕುಚ್ ಕುಚ್ ಹೋತಾ ಹೇ' ಚಿತ್ರ ಬಿಡುಗಡೆಯಾಗಿತ್ತು. ಚಿತ್ರದಲ್ಲಿ ಶಾರೂಕ್ ಹಾಕಿಕೊಂಡಂತೆಯೇ ಸರ ಮತ್ತು ಪೋಲೊ ಟಿ ಷರ್ಟ್ ಧರಿಸಿ ರಣಬೀರ್, ಚಿತ್ರದ ಸಂಭಾಷಣೆಗಳನ್ನು ಹುಡುಗಿಯರ ಮುಂದೆ ಅದೇ ಶೈಲಿಯಲ್ಲಿ ಹೇಳುತ್ತಿದ್ದನಂತೆ. ಅದರಿಂದ ಹುಡುಗಿಯರು ಇಂಪ್ರೆಸ್ ಆಗುತ್ತಿದ್ದದ್ದೂ ನಿಜ ಎಂದು 33ರ ಹರೆಯದ ರಣಬೀರ್ ಹೇಳಿಕೊಂಡಿದ್ದಾನೆ.

ರಣಬೀರ್ ಇತ್ತೀಚೆಗೆ ದೀಪಿಕಾ ಜೊತೆಗಿರುವಾಗಲೇ ಪತ್ರಕರ್ತರಿಂದ ಮದುವೆಯ ಪ್ರಶ್ನೆ ಎದುರಾಯಿತು. 'ಅದು ನನ್ನ ಬದುಕಿನಲ್ಲಿ ಬಹುದೊಡ್ಡ ಪ್ರಶ್ನೆ. ಮದುವೆ ಎಂಬ ಆಚರಣೆಯ ಬಗ್ಗೆ ನನಗೆ ಸಂಪೂರ್ಣ ನಂಬಿಕೆ ಇದೆ. ಮದುವೆ ಮುಹೂರ್ತ ನಿಗದಿಯಾದ ಬಳಿಕ ನಾನೇ ಅದನ್ನು ಬಹಿರಂಗಪಡಿಸುತ್ತೇನೆ' ಎನ್ನುವುದು ರಣಬೀರ್ ಉತ್ತರವಾಗಿತ್ತು.

ಪಕ್ಕದಲ್ಲಿಯೇ ಇದ್ದ ರಣಬೀರ್‌ನ ಮಾಜಿ ಪ್ರೇಯಸಿ ದೀಪಿಕಾ ಕೂಡಲೇ, 'ನಾನು ಅನುಮತಿ ನೀಡುವವರೆಗೂ ರಣಬೀರ್ ಮದುವೆಯಾಗುವಂತಿಲ್ಲ' ಎಂದು ತಮಾಷೆ ಮಾಡಿದಳು. ಅದರಲ್ಲಿ ಬೇಸರವೂ ಸಣ್ಣನೆ ಇಣುಕುತ್ತಿತ್ತು ಎನ್ನುವುದು ಬಿ–ಟೌನ್ ಪಂಡಿತರ ಅಂದಾಜು. ಆದರೆ ದೀಪಿಕಾ ಹಾಗೇಕೆ ಹೇಳಿದಳು ಎನ್ನುವುದು ಈಗ ಎಲ್ಲರನ್ನೂ ತಲೆ ತಿನ್ನುತ್ತಿರುವ ಪ್ರಶ್ನೆ.

■ ಅಮಿ

# ಕನ್ನಡದ ಕೃತಿ ಬಾಲಿವುಡ್‌ಗೆ



ಇತ್ತೀಚೆಗೆ ಉತ್ತರ ಭಾರತದ ನಟಿಯರಿಗೇ ಆದ್ಯತೆ ನೀಡುತ್ತಿದ್ದ ಬಾಲಿವುಡ್, ಈಗ ಪ್ರತಿಭಾವಂತ ದಕ್ಷಿಣ ಭಾರತದ ನಟಿಯರತ್ತ ಮತ್ತೆ ಕಣ್ಣು ಹಾಯಿಸುತ್ತಿದೆ. ದಕ್ಷಿಣದ ಸಿನಿಮಾಗಳಲ್ಲಿ ಹೆಸರು ಮಾಡಿ ಬಾಲಿವುಡ್‌ಗೆ ಕಾಲಿಡುತ್ತಿರುವ ನಟಿಯರ ಸಾಲಿಗೆ ಕೃತಿ ಕರಬಂಧ ಸೇರ್ಪಡೆಯಾಗಿದ್ದಾಳೆ. ತೆಲುಗು ಸಿನಿಮಾ 'ಬೋಣಿ'ಯಿಂದ ಚಿತ್ರರಂಗಕ್ಕೆ ಕಾಲಿಟ್ಟ ಕೃತಿ, ಕನ್ನಡಕ್ಕೆ ಪ್ರವೇಶಿಸಿದ್ದು 'ಚಿರು' ಚಿತ್ರದ ಮೂಲಕ. ಕನ್ನಡ ಮತ್ತು ತೆಲುಗಿನಲ್ಲಿ ಬಿಡುವಿಲ್ಲದೆ ಸಿನಿಮಾಗಳಲ್ಲಿ ಬಿಜಿಯಾಗಿರುವ ದೆಹಲಿ ಮೂಲದ ಈ ಚೆಲುವೆಗೆ ಬಿ–ಟೌನ್ ಕದ ತೆರೆದಿದೆ. ಮುಖೇಶ್ ಭಟ್ ನಿರ್ದೇಶನದ 'ರಾಜ್ 4' ಚಿತ್ರದಲ್ಲಿ ಕೃತಿ ನಟಿಸುತ್ತಿದ್ದಾಳೆ. ಇದು ತ್ರಿಕೋನ ಪ್ರೇಮಕಥೆಯ ಚಿತ್ರ. ಕೃತಿ ಸನೋನ್ ಜೊತೆ ಡೇಟಿಂಗ್ ನಡೆಸುವ ಮೂಲಕ ಸುದ್ದಿಯಾಗಿರುವ ಗೌರವ್ ಅರೋರಾ 'ರಾಜ್' ಸರಣಿಯ ನಾಲ್ಕನೇ ಆವೃತ್ತಿಯಲ್ಲಿ ಮತ್ತೊಬ್ಬ ಕೃತಿ ಜೊತೆ ತೆರೆ ಹಂಚಿಕೊಳ್ಳುತ್ತಿದ್ದಾನೆ. ಅಂದ ಹಾಗೆ, ಕೃತಿ ಕರಬಂಧ ಜೊತೆ ನಟಿಸುತ್ತಿರುವ ಮತ್ತೊಬ್ಬ ನಾಯಕ 'ಸೀರಿಯಲ್ ಕಿಸ್ಸರ್' ಖ್ಯಾತಿಯ ಇಮ್ರಾನ್ ಹಷ್ಮಿ.

'ಮಿಂಚಾಗಿ ನೀನು ಬರಲು', 'ಸಕ್ಕತ್ತಾಗವ್ನೆ', 'ನಾ ಮೆಚ್ಚಿದ ಹುಡುಗ', 'ದಳಪತಿ', 'ಸಂಜು ವೆಡ್ಸ್ ಗೀತಾ 2', 'ಪಾಪು' ಹೀಗೆ ಕೃತಿ ಕನ್ನಡದಲ್ಲಿ ನಟಿಸುತ್ತಿರುವ ಚಿತ್ರಗಳ ಪಟ್ಟಿ ದೊಡ್ಡದಾಗಿದೆ. ತೆಲುಗಿನ 'ಬ್ರೂಸ್‌ಲೀ'ಯಲ್ಲಿ ನಟಿಸಿದ್ದ ಆಕೆ ಈಗ ತಮಿಳಿನ 'ಬ್ರೂಸ್‌ಲೀ'ಯಲ್ಲಿಯೂ ಬಣ್ಣ ಹಚ್ಚುವ ಮೂಲಕ ಕಾಲಿವುಡ್‌ಗೆ ಕಾಲಿಡುತ್ತಿದ್ದಾಳೆ.